ಅ) 46,313.

ಆ) ಈ 46,313 ಪಡಿತರ ಚೀಟಿಗಳಲ್ಲಿ 6,113 ಹಸಿರು ಪಡಿತರ ಚೀಟಿಗಳಾಗಿವೆ. ಹೊಸ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಯಾವುದೇ ಪಡಿತರ ಚೀಟಿಗಳನ್ನು ವಿತರಿಸಿರುವುದಿಲ್ಲ. ಈಗಾಗಲೇ ವಿತರಿಸಲಾಗಿದ್ದ ಪಡಿತರ ಚೀಟಿಗಳನ್ನು ಹೊಸ ಸಾರ್ವಜನಿಕ ವಿತರಣೆ ಪದ್ಧತಿಯಡಿಯಲ್ಲಿ ಮುಂದುವರೆಸಲಾಗಿದೆ.

ಇ) ದಿನಾಂಕ 20-8-97 ರಂತೆ, 60 ಅರ್ಜಿಗಳು ಬಾಕಿ ಇವೆ.

ಈ) ಅರ್ಹ ಕುಟುಂಬಗಳು ಪಡಿತರ ಚೀಟಿಗಳಿಗಾಗಿ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಪಡಿತರ ಚೀಟಿಗಳನ್ನು ಕೊಡಲಾಗುವುದು. ಆದ್ದರಿಂದ, ಪಡಿತರ ಚೀಟಿಗಳನ್ನು ಕೊಡುವುದಕ್ಕಾಗಿ ಸಮೀಕ್ಷೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಬೆಂಗಳೂರಿನಲ್ಲಿ ಮೇಲು ಸೇತುವೆ ನಿರ್ಮಾಣ.

2814 (3369)

ಶ್ರೀಮತಿ ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ರಿಚಮಂಡಟೌನ್, ಟ್ರಿನಿಟಿ ವೃತ್ತ, ಮೇಖ್ರಿವೃತ್ತಗಳಲ್ಲಿ ಮೇಲು ಸೇತುವೆ ನಿರ್ಮಾಣಕ್ಕಾಗಿ ಸರ್ಕಾರದವರು ಟೆಂಡರ್ ಕರೆದಿರುತ್ತಾರೆಯೇ?

ಆ) ಮೇಲ್ಕಂಡ ಕಾಮಗಾರಿಗಳಿಗಾಗಿ ಅಂದಾಜು ವೆಚ್ಚ ಎಷ್ಟು?

ಇ) ಖಾಸಗಿಯವರಿಗೆ ಸದರಿ ಕಾಮಗಾರಿಯನ್ನು ವಹಿಸಲಾಗಿದೆಯೇ?

ಈ) ಈ ಕಾಮಗಾರಿಯು ಪ್ರಾರಂಭವಾಗಿದೆಯೇ?

ಉ) ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ರಿಚಮಂಡ್ ವೃತ್ತದಲ್ಲಿ ಮೇಲುಸೇತುವೆ ನಿರ್ಮಾಣಕ್ಕಾಗಿ ಗುತ್ತಿಗೆದಾರರನ್ನು ಪೂರ್ವಾರ್ಹತಾ ಟೆಂಡರ್ ಕರೆಯಲಾಗಿದೆ.

ಆ) 1) ರಿಚಮೆಂಡ್ ವೃತ್ತದಲ್ಲಿ ಮೇಲು ಸೇತುವೆನಿರ್ಮಾಣ ರೂ.40.93 ಕೋಟಿ.

2) ಟ್ರಿನಿಟಿವೃತ್ತದಲ್ಲಿ ಮೇಲು ಸೇತುವೆ ರೂ.30.00 ಕೋಟಿ

3) ಮೇಖ್ರಿವೃತ್ತದಲ್ಲಿ ಮೇಲು ಸೇತುವೆ ರೂ.25.00 ಕೋಟಿ

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಆಟೋರಿಕ್ಷಾಗಳು

2815 (4079)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ, ಧಾರವಾಡ, ಮಹಾನಗರದಲ್ಲಿರುವ ಆಟೋರಿಕ್ಷಾಗಳ ಸಂಖ್ಯೆ ಒಟ್ಟು ಎಷ್ಟು?

ಆ) ಎಲ್ಲಾ ಆಟೋರಿಕ್ಷಾಗಳಿಗೆ ಮೀಟರುಗಳನ್ನು ಅಳವಡಿಸಲಾಗಿದೆಯೇ? ಅಳವಡಿಸದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಆಟೋರಿಕ್ಷಾದವರಿಗೆ ಇರುವ ಸಮಸ್ಯೆಗಳೇನು?

ಈ) ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳೇನು?

ಉ) ಇವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) 6375 ಆಟೋರಿಕ್ಷಾಗಳು.

ಆ) ಎಲ್ಲಾ ಆಟೋರಿಕ್ಷಾಗಳಿಗೆ ಮೀಟರುಗಳನ್ನು ಅಳವಡಿಸಲಾಗಿದೆ.

ಇ) ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿ, ಧಾರವಾಡರವರು ಪರಿಷ್ಕರಿಸಿರುವ ದರದಂತೆ ಆಟೋರಿಕ್ಷಗಳನ್ನು ಚಾಲನೆ ಮಾಡುವುದು ಸಾಧ್ಯವಾಗುವುದಿಲ್ಲವೆಂದು ರಸ್ತೆಯ ಪರಿಸ್ಥಿತಿ ಹದಗೆಟ್ಟಿರುವುದರಿಂದ ಸಂಚಾರ ಮಾಡುವುದು ಕಷ್ಟವೆಂಬುದು ಆಟೋರಿಕ್ಷ ಸಂಘದವರ ಅಭಿಪ್ರಾಯ.

ಈ) ಚಾಲಕರು ಆಟೋರಿಕ್ಷಾಗಳಲ್ಲಿ ಮೀಟರುಗಳು ತೋರಿಸುವಂತೆ ಬಾಡಿಗೆಯನ್ನು ಪಡೆಯದೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡುವುದು ಕರೆದ ಸ್ಥಳಗಳಿಗೆ ಬಾರದೆ